**ಡಿಡಬ್ಲ್ಯೂ.1: ದೇವಿಕಾ ಎಲ್ .,**

**ಲಘು ವ್ಯವಹಾರಗಳ ಹಾಗೂ ಎಸಿಜೆಎಂ ನ್ಯಾಯಾಲಯ**

**ಬೆಂಗಳೂರು**

**ಸಿಸಿ ನಂಬರ್‌ಃ1747/2024**

| | |
|---|---|
| ಸಾಕ್ಷಿದಾರರ ಹೆಸರು | ದೇವಿಕಾ ಎಲ್ |
| ಗಂಡನ ಹೆಸರು | ದಿನೇಶ್ |
| ವಯಸ್ಸು | 45 ವರ್ಷ |
| ಉದ್ಯೋಗ | ಖಾಸಗಿ ಉದ್ಯೋಗ |
| ವಾಸಸ್ಥಳ | ಮರಿಯಪ್ಪನಪಾಳ್ಯ, ಬೆಂಗಳೂರು. |

**ದಿನಾಂಕಃ26.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಪಿರ್ಯಾದುದಾರರು ನನಗೆ ಎಂಟು ವರ್ಷಗಳಿಂದ ಪರಿಚಯವಿರುತ್ತಾರೆ. ನಾಲ್ಕು ವರ್ಷಗಳ ಹಿಂದೆ ಪಿರ್ಯಾದುದಾರರಿಂದ 40 ಸಾವಿರ ರೂ. ಸಾಲ ಪಡೆದುಕೊಂಡಿದ್ದೆನು, ಅದರಲ್ಲಿ 20 ಸಾವಿರ ರೂ.ಗಳನ್ನು ಮರುಪಾವತಿಸಿರುತ್ತೇನೆ. ಉಳಿಕೆ 20 ಸಾವಿರ ರೂ.ಗಳಿಗಾಗಿ ಪಿರ್ಯಾದುದಾರರು ನನ್ನ ಎಟಿಎಂ ಕಾರ್ಡ್, ಪಾಸ್ ಬುಕ್ ಹಾಗೂ ಚೆಕ್ಕು ಬುಕ್ ಗಳನ್ನು ಪಡೆದುಕೊಂಡಿರುತ್ತಾರೆ. ನಾನು ಕೆಲಸ ಮಾಡುವ ಸ್ಥಳಕ್ಕೆ ಪಿರ್ಯಾದುದಾರರು ಹಾಜರಾಗಿ ನನ್ನನ್ನು Fraud ಎಂದು ಎಲ್ಲರಿಗೂ ಹೇಳಿ ನನ್ನ ಕೆಲಸಕ್ಕೆ ತೊಂದರೆ ನೀಡಿದರು, ಆ ಕಾರಣ ನಾನು ಈಗ ಮನೆಗೆಲಸಕ್ಕೆ ಹೋಗುತ್ತಿದ್ದೇನೆ. ನಾನು ಪಿರ್ಯಾದುದಾರರಿಗೆ 20 ಸಾವಿರ ರೂ.ಗಳನ್ನು ಮಾತ್ರ ಮರುಪಾವತಿಸಬೇಕಾಗಿರುತ್ತದೆ. 20 ಸಾವಿರ ರೂ. ಹಣವನ್ನು ಮರುಪಾವತಿಸಲು ಸ್ವಲ್ಪ ಕಾಲವಕಾಶ ಬೇಕಾಗಿರುತ್ತದೆ. ಪಿರ್ಯಾದುದಾರರು ನನ್ನ ವಿರುದ್ದ ಪ್ರಕರಣ ದಾಖಲಿಸಿರುವ ಬಗ್ಗೆ

**ಡಿಡಬ್ಲೂ.1: ದೇವಿಕಾ ಎಲ್ .,**

ನನಗೆ ತಿಳಿದಿರುವುದಿಲ್ಲ. ನೋಟೀಸು ನನಗೆ ತಲುಪಿರುವುದಿಲ್ಲ. ಪಿರ್ಯಾದುದಾರರು ನನ್ನಿಂದ ಪಡೆದುಕೊಂಡಂತಹ ಚೆಕ್ ಬುಕ್ ಹಾಗೂ ಎಟಿಎಂ ಕಾರ್ಡ್ ಮತ್ತ ಪಾಸ್ ಬುಕ್ ಗಳನ್ನು ಹಿಂದಿರುಗಿಸುವಂತೆ ಕೇಳಿಕೊಂಡಂತೆ ಅವರು ಹಿಂದಿರುಗಿಸಲಿಲ್ಲ ಆ ಕಾರಣ ನಾನು ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೆನು. ಸದರಿ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು **<u>ನಿ.ಡಿ.1</u>** ಎಂದು ಗುರುತಿಸಲಾಯಿತು. ಪಿರ್ಯಾದುದಾರರು ನನ್ನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ತಮಲ್ಲಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಸಮಯಾವಕಾಶ ಕೋರಲಾಗಿದ್ದು ನೀಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದ್ದೆ)**

**(ಓ. ಹೇ. ಕೇ. ಸ. ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.